†ಶ್ರೀ ಎಸ್ ಬಿ ನಾಗರಾಳ್ —ನನಗೆ ಬಂದಿರತಕ್ಕಂಥಾ ವರದಿ ಪ್ರಕಾರ ಸೆಪ್ಟೆಂಬರ್ ಅಖೈರ್‌ನ ವರೆಗೆ ಅಸ್ವಾಸಿಪನ್ ಪ್ರೊಸೀಡಿಂಗ್ಸ್ ವರ್ಕ್ಸ್ ಕೂಡ ಮುಂಗಿದಿದೆ. ಇನ್ನು ಉಳಿದಿರುವ ಕೆಲಸವನ್ನು ಆದಷ್ಟು ಬೇಗ ಮುಂಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Expenditure by T. D. B., Chikodi for Welfare of SC/ST

130. SRI J. S. AMMANNAVAR (Sadalga).—Will the Minister for Rural Development and Panchayat Raj be pleased to state :—

(*a*) the expenditure incurred by the TDB, Chikkodi for the year 1974-75 and 1975-76 out of the 18% budget provision earmarked for the welfare of the Scheduled Castes and Scheduled Tribes ;

(*b*) the names of the beneficiaries and the type of benefit received by them ; (Village wise information may be furnished) ;

(*c*) whether they have been benefitted by way of receiving the money in cash or by the materials supplied to them ?

SRI K. PRABHAKAR (Minister for Rural Development and Panchayat Raj).—

(*a*) 1974-75 Rs. 1,02,186-00
1975-76 Rs. 1,22,226-00

(*b*) *Vide* Statement 'A' and 'B' Placed the Table of the House*

(*c*) By way of materials supplied to them.

ಶ್ರೀ ಜೆ ಎಸ್ ಅಮ್ಮಣ್ಣನವರ್ —ಸ್ವಾಮಿ, ತಾವು ಈಗ ಕೊಟ್ಟಿರುವ ಪಟ್ಟಿ ಪ್ರಕಾರ ಮಾಂಗರ್ ಅನ್ನುವ ಒಂದು ಊರಿನಲ್ಲಿ ಲಿಫ್ಟ್ ಇರಿಗೇಷನ್‌ಗೋಸ್ಕರ ಸುಮಾರು ೨೦ ಸಾವಿರ ರೂಪಾಯಿ ಖರ್ಚು ಮಾಡಿದ್ದೀರಿ. ಇದನ್ನು ನೋಡಿದರೆ ಇದು ಒಂದೇ ಒಂದು ಮನೆತನದವರಿಗೆ ಉಪಯೋಗವಾಗುವಂಥಾ ಒಂದು ಸ್ಕೀಮಿನದ್ದು ಎಂದು ಗೊತ್ತಾಗುತ್ತದೆ ತಾವು ಇದರಲ್ಲಿ ಹೆಸರಿನ ಪಟ್ಟಿಯನ್ನು ಏನು ಕೊಟ್ಟಿದ್ದೀರಿ ಇದರಲ್ಲಿ ಕೆಲವೇ ಹಳ್ಳಿಗಳಿಗೆ ಮಾತ್ರ ಇದರಿಂದ ಉಪಯೋಗವಾಗಿದೆ. ನನ್ನ ತಾಲ್ಲೂಕು ಬಗ್ಗೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ೧೩೦ ಹಳ್ಳಿಗಳು ಇವೆ. ಇದರಲ್ಲಿ ಹರಿಜನರ ಸಂಖ್ಯೆಯೇ ಹೆಚ್ಚಾಗಿರುವಂಥಾ ಸುಮಾರು ೧೦ ಹಳ್ಳಿಗಳ ಹೆಸರುಗಳನ್ನು ಹೇಳುತ್ತೇನೆ. ಅವರಿಗೆ ಏನೂ ಕೊಟ್ಟಿಲ್ಲ ಈ ತರಹ ಆರ್ಬಿಟ್ರರಿಯಾಗಿ ಮಾಡುವುದಕ್ಕೆ ಏನು ಕಾರಣ? ಇದರಲ್ಲಿ ಏನಾದರೂ ಒಂದು ಉದ್ದೇಶ ಇದೆಯೇ?

† ಶ್ರೀ ಕೆ ಪ್ರಭಾಕರ್ —ಮಾನ್ಯ ಸದಸ್ಯರು ಒಂದೇ ಒಂದು ಮನೆತನದವರಿಗೆ ಇದರ ಉಪಯೋಗವಾಗಿದೆ ಅಂತ ಹೇಳತಕ್ಕಂಥಾದ್ದರಲ್ಲಿ ಏನೂ ಆಧಾರ ಇಲ್ಲ ಎಂದೂ ನಾನು ಹೇಳುತ್ತೇನೆ. ಮತ್ತು ಇನ್ನೂ ಅನೇಕ ಗ್ರಾಮಗಳಿಗೆ ಈ ಒಂದೂ ಪ್ರಯೋಜನ ಸಿಕ್ಕಿಲ್ಲ ಅಂತ ಹೇಳುವುದು ಸ್ವಾಭಾವಿಕವೇ. ಯಾವ ಯಾವ ಗ್ರಾಮಗಳಿಗೆ ಈ ಲಿಫ್ಟ್ ಇರಿಗೇಷನ್ ಸ್ಕೀಂ ಪ್ರಯೋಜನ ದೊರೆತಿದೆ ಮತ್ತು ಯಾವ ಯಾವ ಗ್ರಾಮಗಳಿಗೆ ಈ ಲಿಫ್ಟ್ ಇರಿಗೇಷನ್ ಸ್ಕೀಂ ಪ್ರಯೋಜನ ದೊರೆತಿಲ್ಲ ಎಂಬುದನ್ನು ನೋಡಿ ಅದರ ಪ್ರಯೋಜನವನ್ನು ದೊರಕಿಸಿಕೊಡಲು ಆಲೋಚಿಸಬೇಕಾಗುತ್ತದೆ ಆದರೆ ಮಾನ್ಯ ಸದಸ್ಯರು ಮಾಂಗರ್ ಅನ್ನುವ ಊರಿನಲ್ಲಿ ಒಂದೇ ಒಂದು ಮನೆತನದವರಿಗೆ ಈ ಸಹಾಯ ಸಿಕ್ಕಿದೆ ಅಂತ ಹೇಳುವುದನ್ನು ಪರೀಕ್ಷೆ ಮಾಡಿಸಲಾಗುತ್ತದೆ. ಮತ್ತು ಉಳಿದ ಗ್ರಾಮಗಳಲ್ಲಿ ಇನ್ನು ಏನೇನು ಸಹಾಯ ದೊರೆಯಬೇಕು ಎಂದೂ ಹೇಳುತ್ತಾರೋ ಆ ಗ್ರಾಮಗಳಲ್ಲೂ ಕೂಡ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

---

* Copy placed in the Karnataka Legislature Library *vide* No 2. Dated 8th November 1976

ಶ್ರೀ ಜೆ. ಎಸ್. ಅಮ್ಮಣ್ಣನವರ್.— ಈ ಬಗ್ಗೆ ಮೆಟೀರಿಯಲ್ಸ್ ಏನು ಸಪ್ಲೈ ಮಾಡಿದ್ದಾರೆ ಅದಕೆ ಹಣ ಏನು ಪಾವತಿ ಮಾಡಬೇಕು ಅದಕ್ಕಿಂತಲೂ ಹೆಚ್ಚು ಹಣ ಕೊಟ್ಟಿದ್ದಾರೆ. ಅಂದರೆ ಮೆಟೀರಿಯಲ್ಸ್ ಕಡಿಮೆ ಬಂದಿದೆ; ದುಡ್ಡು ಹೆಚ್ಚು ಕೊಟ್ಟಿದ್ದಾರೆ ಅನ್ನುವ ದೂರು ನನ್ನ ಗಮನಕ್ಕೆ ಬಂದಿದೆ. ಆದುದರಿಂದ ಪ್ರತಿ ಹಳ್ಳಿಯಲ್ಲೂ ಈ ಬಗ್ಗೆ ಒಂದು ಸ್ಯಾಂಪಲ್ ಸರ್ವೆ ಮಾಡಿಸುವುದಕ್ಕೆ ಒಂದು ಸಮಿತಿ ನೇಮಿಸುವುದಕ್ಕೆ ತರ್ತಾರಿದ್ದೀರಾ?

ಶ್ರೀ ಕೆ. ಪ್ರಭಾಕರ್ — ಮಾನ್ಯ ಸದಸ್ಯರು ಸಮಿತಿ ನೇಮಿಸಬೇಕು ಎಂದು ಹೇಳತಕ್ಕಂಥಾದ್ದನ್ನು ಒಪ್ಪಿಕೊಳ್ಳುವುದು ಕಷ್ಟವಾದರೂ ಕೂಡ ಆ ಬಗ್ಗೆ ಏನು ನಡೆದಿದೆ ಅನ್ನುವುದನ್ನು ಪರಿಶೀಲನೆ ಮಾಡಲಾಗುತ್ತದೆ

Bus Stand at Guledgud City

144. SRI B. M. HORAKERI (Guledgud).— Will the Minister for Transport and Tourism be plased to state :—

(*a*) whether plans and estimates for construction of the Bus-Stand at Guledgud city have been prepared and sanctioned;

(*b*) if so, the estimated cost of the building;

(*c*) whether required finance has been provided and sanctioned for the construction of the Bus Stand Building;

(*d*) the reason for not undertaking the construction of the Bus-stand building;

(*e*) the other difficulties, if any in the execution of the work in a town with 30,000 population?

SRI M. MOHAMMED ALI (Minister for Transport and Tourism).—

(*a*) No.

(*b*) and (*c*) Does not arise in view of reply to clause (*a*).

(*d*) and (*e*) The proposal is under consideration of the Corporation (K. S. R. T. C.)

ಶ್ರೀ ಬಿ ಎಂ. ಹೊರಕೇರಿ.— ಈ ಪ್ರಶ್ನೆಯಲ್ಲಿ (ಈ) ಮತ್ತು (ಉ) ಸಲಹೆಯು ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯವರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದಕ್ಕೆ ಇನ್ನು ಎಷ್ಟು ಕಾಲಾವಧಿ ಬೇಕಾಗುತ್ತದೆ ಅನ್ನುವುದನ್ನು ಹೇಳುತ್ತೀರಾ?

† SRI M MOHAMMED ALI — It is difficult to fix up any time-limit because the construction of bus station depend mostly on availability of funds. The Corporation has appointed a Committee to fix up the priority for the construction of bus station keeping in view the funds that are available

ಶ್ರೀ ಬಿ ಎಂ ಹೊರಕೇರಿ.— ಈಗ ಏನಂ ಕನ್‌ಸ್ಟ್ರಕ್ಷನ್ ಆಗಿದೆಯೋ ಅದು ಹಳೇ ತಗಡನ್ನು ಉಪಯೋಗಿಸಿ ಕಟ್ಟಿದ್ದು. ಆದುದರಿಂದ ಮಳೆಗಾಲದಲ್ಲಿ ಅದು ತುಂಬಾ ಸೋರುವುದರಿಂದ ಆ ಜನರಿಗೆ ತುಂಬಾ ತೊಂದರೆಯಾಗುತ್ತಾ ಇದೆ. ಈ ಬಗ್ಗೆ ಜನರಿಗೆ ತೊಂದರೆಯಾಗದೇ ಇರುವ ಹಾಗೆ ಅನುಕೂಲ ಮಾಡಿಕೊಡುತ್ತೀರಾ?